# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 465 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 12.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯಕ್ಕೆ ಮಹಾದಾಯಿ ಜಲ ವಿವಾದ ನ್ಯಾಯಾಧೀಕರಣ ತೀರ್ಪಿನಲ್ಲಿ ದೊರೆತಿರುವ ನೀರಿನ ಪ್ರಮಾಣವೆಷ್ಟು; ಈ ತೀರ್ಪಿನ ಮುಖ್ಯ ಸಾರಾಂಶ ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು;</td><td>
ಮಹದಾಯಿ ಜಲವಿವಾದ ನ್ಯಾಯಾಧಿಕರಣವು ದಿನಾಂಕ:14.08.2018ರಂದು ತೀರ್ಪನ್ನು ನೀಡಿದ್ದು, ಗೋವಾ, ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳಿಗೆ ಈ ಕೆಳಗಿನಂತೆ ನೀರಿನ ಹಂಚಿಕೆ ಮಾಡಿರುತ್ತದೆ:
<table>
<tr><th>ಕ್ರ. ಸಂ.</th><th>ಕಣಿವೆ ರಾಜ್ಯ</th><th>ಹಂಚಿಕೆ ನೀರಿನ ಪ್ರಮಾಣ</th><th>ಷರಾ</th></tr>
<tr><td>1</td><td>ಕರ್ನಾಟಕ</td><td>13.420 TMC</td><td>-</td></tr>
<tr><td>2</td><td>ಗೋವಾ</td><td>33.395 TMC</td><td>(ಪ್ರಸ್ತುತ ಬಳಕೆಯಾಗುತ್ತಿರುವ 9.395 TMC ಸೇರಿದೆ)</td></tr>
<tr><td>3</td><td>ಮಹಾರಾಷ್ಟ್ರ</td><td>1.330 TMC</td><td>-</td></tr>
<tr><td></td><td>ಒಟ್ಟು:</td><td>48.145 TMC</td><td>-</td></tr>
</table>
ಕರ್ನಾಟಕ ರಾಜ್ಯಕ್ಕೆ ಮಹದಾಯಿ ನ್ಯಾಯಾಧಿಕರಣದ ತೀರ್ಪಿನನ್ವಯ ಒಟ್ಟು 13.42 TMC ನೀರು ಹಂಚಿಕೆಯಾಗಿದ್ದು, ವಿವರಗಳು ಕೆಳಗಿನಂತಿದೆ:
<table>
<tr><th>ಕ್ರ. ಸಂ</th><th>ಯೋಜನೆ</th><th>ನೀರಿನ ಹಂಚಿಕೆ (TMC)</th><th>ಯೋಜನೆ</th></tr>
<tr><td>1</td><td>ಹುಬ್ಬಳ್ಳಿ-ಧಾರವಾಡ ನಗರಗಳು, ಕುಂದಗೋಳ ಮತ್ತು ಮಾರ್ಗಮಧ್ಯೆ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು</td><td>3.90</td><td>(1.72 TMC ಕಳಸಾ ನಾಲಾ ಹಾಗೂ 2.18 TMC ಬಂಡೂರ ನಾಲಾ) ಮಲಪ್ರಭಾ ಜಲಾಶಯಕ್ಕೆ ತಿರುವುಗೊಳಿಸಲು</td></tr>
<tr><td>2</td><td>ಮಹದಾಯಿ ಕಣಿವೆಯಲ್ಲಿನ ಬಳಕೆಗಾಗಿ</td><td>1.50</td><td>(in-Basin use)</td></tr>
<tr><td>3</td><td>ಜಲ ವಿದ್ಯುತ್ ಉತ್ಪಾದನೆಗಾಗಿ</td><td>8.02</td><td>Non consumptive use</td></tr>
<tr><td></td><td>ಒಟ್ಟು:</td><td>13.42</td><td>-</td></tr>
</table>
ಕೇಂದ್ರ ಸರ್ಕಾರವು ದಿನಾಂಕ:27.02.2020 ರಂದು ಮಹದಾಯಿ ಜಲವಿವಾದ ನ್ಯಾಯಾಧಿಕರಣದ ಆದೇಶದ ವರದಿಯನ್ನು ಕೇಂದ್ರ ಅಧಿಕೃತ ಗಜೆಟ್‌ನಲ್ಲಿ ಪ್ರಕಟಿಸಿರುತ್ತದೆ. ಇದಲ್ಲದೆ, ಕೇಂದ್ರ ಸರ್ಕಾರವು ದಿನಾಂಕ:22.05.2023ರ ಅಧಿಸೂಚನೆಯಲ್ಲಿ Mahadayi-PRAWAH (Progressive River Authority for Welfare and Harmony) ಪ್ರಾಧಿಕಾರ ರಚಿಸಿರುತ್ತದೆ.
</td></tr>
<tr><td>ಆ)</td><td>ರಾಜ್ಯ ಸರ್ಕಾರ ಮಹದಾಯಿ ಜಲ ವಿವಾದ ನ್ಯಾಯಾಧೀಕರಣ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ದಾವೆ ದಾಖಲಿಸಿದೆಯೇ; ಹಾಗಿದ್ದಲ್ಲಿ, ಈ ದಾವೆ ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು)</td><td>
1.ಮಹದಾಯಿ ಜಲ ವಿವಾದ ನ್ಯಾಯಾಧಿಕರಣದ ತೀರ್ಪಿನ ವಿರುದ್ಧ ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಸಂಖ್ಯೆ:33018/2018 ಅನ್ನು ದಿನಾಂಕ:12.11.2018 ರಂದು ದಾಖಲಿಸಿರುತ್ತದೆ.<br><br>
2.ಕಣಿವೆ ರಾಜ್ಯಗಳು ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಗಳ (ಸಿವಿಲ್ ಅಪೀಲ್) ವಿಚಾರಣೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 13.11.2024ರ ಆದೇಶದಂತೆ ಮುಂದಿನ ವಿಚಾರಣೆಯು ದಿನಾಂಕ:25.01.2025 ಕ್ಕೆ ನಿಗದಿಯಾಗಿದೆ.
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
| --- | --- | --- |
| ಇ) | ರಾಜ್ಯ ಸರ್ಕಾರ ಮಹದಾಯಿ ತೀರ್ಪಿನ ಅಡಿಯಲ್ಲಿ ಹಂಚಿಕೆಯಾಗಿರುವ ನೀರನ್ನು ಕಳಸಾ-ಬಂಡೂರಿ ನಾಲಾ ತಿರುವು ಯೋಜನೆ ಅಡಿಯಲ್ಲಿ ಬಳಸಲು ಯೋಜನೆ ರೂಪಿಸಿದೆಯೇ; ಹಾಗಿದ್ದಲ್ಲಿ, ಈ ಯೋಜನೆ ಅನುಷ್ಠಾನ ಯಾವ ಹಂತದಲ್ಲಿದೆ? (ಪೂರ್ಣ ಮಾಹಿತಿ ನೀಡುವುದು) | ಕಳಸಾ ಮತ್ತು ಬಂಡೂರಾ ನಾಲಾ ತಿರುವು (ಲಿಫ್ಟ್ ಯೋಜನೆ) ಯೋಜನೆಯ ಮೂಲಕ ಒಟ್ಟು 3.90 TMC ನೀರನ್ನು ಮಹದಾಯಿ ನದಿ ಕಣಿವೆಯಿಂದ ಮಲಪ್ರಭಾ ನದಿ ಕಣಿವೆಗೆ ಹರಿಸಿ, ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿರುತ್ತದೆ.<br><br>ಕಳಸಾ ಮತ್ತು ಬಂಡೂರಾ ನಾಲಾ ತಿರುವು (ಲಿಫ್ಟ್ ಯೋಜನೆ) ಯೋಜನೆಗಳ ವಿವರವಾದ ಯೋಜನಾ ವರದಿಗಳಿಗೆ ಕೇಂದ್ರ ಜಲ ಆಯೋಗವು (CWC) ದಿನಾಂಕ:29.12.2022ರಂದು ಅನುಮೋದನೆ ನೀಡಿರುತ್ತದೆ.<br><br>ಕಳಸಾ ನಾಲಾ ತಿರುವು ಯೋಜನೆ (ಲಿಫ್ಟ್ ಯೋಜನೆ)ಗೆ ದಿನಾಂಕ:20.06.2024ರಂದು ರೂ.463.19 ಕೋಟಿಗಳಿಗೆ ಶಾಸನಬದ್ಧ ಅನುಮೋದನೆಗಳನ್ನು ಪಡೆದ ನಂತರವೇ ಯೋಜನೆಗಳನ್ನು ಕಾರ್ಯಗತಗೊಳಿಸುವ ಷರತ್ತಿಗೆ ಒಳಪಟ್ಟು ಗುತ್ತಿಗೆ ವಹಿಸಲಾಗಿದ್ದು, ಪ್ರಸ್ತುತ ಸದರಿ ಯೋಜನೆಯ ಸರ್ವೇ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಅರಣ್ಯೇತರ ಭೂಮಿಗೆ ಭೂಸ್ವಾಧೀನ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.<br><br>ಬಂಡೂರ ನಾಲಾ ಯೋಜನೆ (ಲಿಫ್ಟ್ ಯೋಜನೆ)ಗೆ ದಿನಾಂಕ:15.03.2024ರಂದು ರೂ.606.80 ಕೋಟಿಗಳಿಗೆ ಶಾಸನಬದ್ಧ ಅನುಮೋದನೆಗಳನ್ನು ಪಡೆದ ನಂತರವೇ ಯೋಜನೆಗಳನ್ನು ಕಾರ್ಯಗತಗೊಳಿಸುವ ಷರತ್ತಿಗೆ ಒಳಪಟ್ಟು ಗುತ್ತಿಗೆ ವಹಿಸಲಾಗಿದ್ದು, ಸದರಿ ಯೋಜನೆಗೆ ಅವಶ್ಯಕವಿರುವ ಅರಣ್ಯೇತರ ಪ್ರದೇಶಕ್ಕೆ ಭೂಸ್ವಾಧೀನ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಲಾಗಿದೆ. ಸದರಿ ಯೋಜನೆಯ ವಿನ್ಯಾಸಗಳು ಹಾಗೂ ನಕ್ಷೆಗಳು ತಯಾರಿಕಾ ಹಂತದಲ್ಲಿದೆ.<br><br>ಕಳಸಾ ನಾಲಾ ಮತ್ತು ಬಂಡೂರಾ ನಾಲಾ ತಿರುವು ಯೋಜನೆಗಳಿಗೆ ಅಗತ್ಯವಿರುವ ಕ್ರಮವಾಗಿ 26.925 ಹೆಕ್ಟರ್ ಮತ್ತು 28.4427 ಹೆಕ್ಟರ್ ಅರಣ್ಯ ಭೂಮಿ ಸ್ವಾಧೀನತೆಗೆ ಈಗಾಗಲೇ MOEF & CCನ Parivesh Portal ನಲ್ಲಿ ಪ್ರಸ್ತಾವನೆಗಳನ್ನು upload ಮಾಡಲಾಗಿದ್ದು, ಕೇಂದ್ರ ಸರ್ಕಾರದ ಅಗತ್ಯ ತೀರುವಳಿ ನಿರೀಕ್ಷಿಸಲಾಗಿದೆ.<br><br>ಕಳಸಾ ನಾಲಾ ತಿರುವು ಯೋಜನೆಗೆ ಸಂಬಂಧಿಸಿದಂತೆ 10.685 ಹೆಕ್ಟರ್ ಕ್ಷೇತ್ರದ ವನ್ಯಜೀವಿ ತೀರುವಳಿ (wildlife clearance) ಅವಶ್ಯಕತೆವಿದ್ದು, ಈ ನಿಟ್ಟಿನಲ್ಲಿ ಸೂಕ್ತ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ (National Board for Wildlife) ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಅಗತ್ಯ ತೀರುವಳಿ ನಿರೀಕ್ಷಿಸಲಾಗಿದೆ. ಸದರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅಗತ್ಯ ಅರಣ್ಯ ಮತ್ತು ವನ್ಯಜೀವಿ ತೀರುವಳಿ/ಅನುಮೋದನೆ ದೊರೆತ ನಂತರ ಯೋಜನಾ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. |

**. ಸಂಖ್ಯೆ: ಜಸಂಇ 10 ಮವಿಇ 2024**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**